ಸುದ್ದಿ ಸಿಂಚನ

ರಾಕೇಶ ಚೌರಾಸಿಯಾಗೆ 11ಕ್ಕೆ ಡಾ. ಗಂಗೂಬಾಯಿ ಹಾನಗಲ್ ಪ್ರಶಸ್ತಿ ಪ್ರದಾನ

ಧಾರವಾಡ: ಭಾರತೀಯ ಸಂಗೀತ ವಿದ್ಯಾಲಯ, ದಾಸ ಟ್ರಸ್ಟ್ ಹಾಗೂ ಡಾ. ಗಂಗೂಬಾಯಿ ಹಾನಗಲ್

ಸಂಗೀತ ವಿದ್ಯಾಲಯ ಜಂಟಿಯಾಗಿ ಆ. 11ರಂದು ಇಲ್ಲಿಯ ಸೃಜನಾ ರಂಗಮಂದಿರದಲ್ಲಿ ಡಾ. ಗಂಗೂಬಾಯಿ ಹಾನಗಲ್ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಹಾಗೂ ಸಂಗೀತೋತ್ಸವ ಆಯೋಜಿಸಿದೆ. ಈ ಕುರಿತು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಭಾರತೀಯ ಸಂಗೀತ ವಿದ್ಯಾಲಯದ ಕಾರ್ಯದರ್ಶಿ ವಿನಯ ನಾಯಕ, ಅಂದು ಸಂಜೆ 5ಕ್ಕೆ ನಡೆಯುವ ಕಾರ್ಯಕ್ರಮವನ್ನು ಶಾಸಕ ಮಹೇಶ ಟೆಂಗಿನಕಾಯಿ ಉದ್ಘಾಟಿಸುವರು. ಕೊಳಲು ವಾದಕ ರಾಕೇಶ ಚೌರಾಸಿಯಾಗೆ ಡಾ. ಗಂಗೂಬಾಯಿ ಹಾನಗಲ್ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ₹ 65 ಸಾವಿರ ನಗದು ಹಾಗೂ ಫಲಕಗಳನ್ನು ಒಳಗೊಂಡಿದೆ. ಪದ್ಮಶ್ರೀ ಡಾ. ಎಂ.ಎಂ. ಜೋಶಿ ಪ್ರಶಸ್ತಿ ಪ್ರದಾನ ಮಾಡಲಿದ್ದು ನಂತರ ನಡೆಯುವ ಸಂಗೀತ ಕಾರ್ಯಕ್ರಮದಲ್ಲಿ ರಾಕೇಶ ಚೌರಾಸಿಯಾ ಅವರ ಕೊಳಲು ವಾದನಕ್ಕೆ ಕಲಾವಿದ ಓಜಸ್ ಅಧಿಯಾ ತಬಲಾ ಸಾಥ್ ನೀಡುವರೆಂದು ಮಾಹಿತಿ ನೀಡಿದರು. ಇದಕ್ಕೂ ಮೊದಲು ಗಾಯಕಿ ರೋಸಿ ದತ್ತಾ ಅವರ ಗಾಯನಕ್ಕೆ ಶ್ರೀಧರ್‌ಮಾಂಡ್ರೆ, ತಬಲಾ ಹಾಗೂ ಗುರುಪ್ರಸಾದ ಹೆಗಡೆ ಹಾರ್ಮೋನಿಯಂ ಸಾಥ್ ನೀಡುವರು. ಮಾಯಾ ರಾಮನ್, ಮಂಜಲಿ ಮೋಕ್ತಾಲಿ ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಖ್ಯಾತ ಸಂಗೀತಗಾರ ಶಫೀಕ್ ಖಾನ್, ತಬಲಾ ವಾದಕ ಪ್ರವೀಣ ಹೂಗಾರ ಇದ್ದರು.

ಫ್ಲೈಓವರ್; ಲ್ಯಾಮಿಂಗ್ಟನ್ ರಸ್ತೆಯಲ್ಲಿ ವಿರೋಧ

ಭಾರೀ ಚರ್ಚೆಗೆ ಗ್ರಾಸವನ್ನುಂಟು ಮಾಡಿದ ಫ್ಲೈಓವರ್| ಕೋರ್ಟ್ ಮೊರೆ ಹೋಗಿರುವ ಕಟ್ಟಡ ಮಾಲೀಕರು

ಚೆನ್ನಮ್ಮ ಸರ್ಕಲ್‌ನಿಂದ ಗದಗ ರಸ್ತೆ ತೆರಳುವ ರಸ್ತೆ.

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ನಗರದಲ್ಲಿ ವಾಹನ ದಟ್ಟಣೆ ತಡೆಗಟ್ಟುವ ಉದ್ದೇಶದಿಂದ ನಿರ್ಮಿಸುತ್ತಿರುವ ಫ್ಲೈಓವರ್ ಕೆಲಸ ಭರದಿಂದ ಸಾಗಿದೆ. ಆದರೆ ಇದೀಗ ಲ್ಯಾಮಿಂಗ್ಟನ್ ರಸ್ತೆಯಲ್ಲಿ (ಚೆನ್ನಮ್ಮ ಸರ್ಕಲ್‌ನಿಂದ ಗದಗ ಕಡೆಗೆ) ನಿರ್ಮಿಸಲು ಉದ್ದೇಶಿಸಿರುವ ಫ್ಲೈಓವರ್‌ಗೆ ಭೂಸ್ವಾಧೀನ ಪ್ರಕ್ರಿಯೆಯೂ ಶುರುವಾಗಿದೆ. ಇನ್ನೊಂದೆಡೆ ವಿರೋಧವೂ ವ್ಯಕ್ತವಾಗುತ್ತಿದೆ. ಈ ನಡುವೆ ಫ್ಲೈಓವರ್‌ಭೂಸ್ವಾಧೀನಕ್ಕೆ ಕೋರ್ಟ್ ತಡೆಯಾಜ್ಞೆ ನೀಡಿದೆಂದು ಹೇಳಲಾಗುತ್ತಿದೆ. ಆದರೆ ಅಧಿಕಾರಿಗಳು ಮಾತ್ರ ಇನ್ನೊಂದು ತಿಂಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇದರ ನಡುವೆಯೇ ಈ ಭಾಗದ ಕಟ್ಟಡಗಳ ಮಾಲೀಕರು ಸೇರಿದಂತೆ ಪ್ರಮುಖರ ಸಭೆಯೂ ಆ. 10ರಂದು ನಡೆಯಲಿದೆ.

ಆಗಿರುವುದೇನು?: ನಗರದ ನಾಲ್ಕು ಕಡೆಗಳಿಂದ ಫ್ಲೈಓವರ್ ರಸ್ತೆ ನಿರ್ಮಿಸಲಾಗುತ್ತಿದೆ. ಎಲ್ಲೆಡೆ ದೊಡ್ಡ ದೊಡ್ಡ ಪಿಲ್ಲರ್ ಹಾಕಿ ಕೆಲಸ ಮಾಡಲಾಗುತ್ತಿದೆ. ಕೆಲಸವೂ ಭರದಿಂದ ಸಾಗಿದೆ. ಇದೀಗ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಿಂದ ಗದಗ ಕಡೆಗೆ ಹೋಗುವ ರಸ್ತೆಯಲ್ಲಿ (ಸಿದ್ದಪ್ಪ ಕಂಬಳಿ ರಸ್ತೆ) ಪ್ರಾರಂಭಿಸುವುದು ಬಾಕಿಯುಳಿದಿದೆ.

ಆದರೆ ಇಲ್ಲಿ ಈದ್ಗಾ ಮೈದಾನದ ಕಾಂಪೌಂಡ್ ಗೋಡೆಯ ಸ್ವಲ್ಪ ಭಾಗವನ್ನು ಫ್ಲೈಓವರ್‌ಗಾಗಿ ತೆರವುಗೊಳಿಸಬೇಕಾಗುತ್ತದೆ.

ಈ ಸಂಬಂಧ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವೂ ಮಹಾನಗರ ಪಾಲಿಕೆಗೆ ಪತ್ರವನ್ನೂ ಬರೆದಿರುವುದುಂಟು. ಈ ವಿಷಯ ಇದೀಗ ಚರ್ಚೆಗೆ ಗ್ರಾಸವನ್ನುಂಟು ಮಾಡಿದೆ.

ಇನ್ನು ಈ ಫ್ಲೈಓವರ್ ಬರುವುದರಿಂದ ಈ ಭಾಗದ ಯಳಮಲಿ ಆಸ್ಪತ್ರೆ, ಸ್ವಾತಿ ಹೋಟೆಲ್, ಶಿವಕೃಷ್ಣ ಮಂದಿರ, ಕೃಷ್ಣ ಭವನ ಸೇರಿದಂತೆ ಹಲವು ಬಿಲ್ಡಿಂಗ್‌ಗಳ ಅಲ್ಪಸ್ವಲ್ಪ ಭಾಗ ಸ್ವಾಧೀನ ಪಡಿಸಿಕೊಳ್ಳುವುದು ಅನಿವಾರ್ಯ. ಈ ಸಂಬಂಧ ಭೂಸ್ವಾಧೀನಕ್ಕೆ ಈಗಾಗಲೇ ನೋಟಿಸ್ ಕೂಡ ನೀಡಲಾಗಿದೆ

ಭೂಸ್ವಾಧೀನ ಪ್ರಕ್ರಿಯೆ ಅಂತಿಮ ಹಂತಕ್ಕೆ ಬಂದಿದೆ. ಇನ್ನೊಂದು ತಿಂಗಳು ಅಥವಾ ಎರಡು ತಿಂಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣವಾಗಲಿದೆ. ತದನಂತರ ಕೆಲಸ ಪ್ರಾರಂಭವಾಗಲಿದೆ ಎಂದು ಅಧಿಕಾರಿ ವರ್ಗ ತಿಳಿಸುತ್ತದೆ.

ಇದರ ನಡುವೆಯೇ ಭೂಸ್ವಾಧೀನ ಪ್ರಕ್ರಿಯೆಗೆ ತಡೆಯಾಜ್ಞೆ ತರಲಾಗಿದೆ ಎಂದು ಮೂಲಗಳು ತಿಳಿಸುತ್ತವೆ.

ಈದ್ಗಾ ಮೈದಾನದ ಕಾಂಪೌಂಡ್ ಹೋಗುತ್ತದೆ ಎಂದು ಹೇಳಲಾಗುತ್ತಿದೆ. ಆದರೆ ಫ್ಲೈಓವರ್ ನಿರ್ಮಾಣದ ಮೂಲ ಯೋಜನೆಯಲ್ಲಿ ಆ ರೀತಿ ಇರಲಿಲ್ಲ. ಉದ್ದೇಶ ಪೂರ್ವಕವಾಗಿ ಇದನ್ನು ಮಾಡಲಾಗುತ್ತಿದೆ. ಈ ಬಗ್ಗೆ ಅಂಜುಮನ್ ಸಂಸ್ಥೆಯೂ ಚರ್ಚಿಸಿ ಏನು ಮಾಡಬೇಕು ಎಂಬುದನ್ನು ನಿರ್ಧರಿಸಲಿದೆ.

• **ಅಲ್ತಾಫ ಹಳ್ಳೂರ** ಅಂಜುಮನ ಸಂಸ್ಥೆಯ ಮುಖಂಡ

ಲ್ಯಾಮಿಂಗ್ಟನ್ ರಸ್ತೆಯಲ್ಲಿ ಫ್ಲೈಓವರ್ ಬರುವುದರಿಂದ ಶಿವಕೃಷ್ಣ ಮಂದಿರ ಸೇರಿದಂತೆ ಹಲವು ಕಟ್ಟಡಗಳಿಗೆ ಧಕ್ಕೆಯುಂಟಾಗಲಿದೆ. ಈ ಬಗ್ಗೆ ಚರ್ಚಿಸಲು ಆ. 10ರಂದು ಸಭೆ ಕರೆಯಲಾಗಿದೆ. ಸಭೆಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು.

• **ನಂದನ ಬಳವಳ್ಳಿ** ಅಧ್ಯಕ್ಷರು, ಶಿವಕೃಷ್ಣ ಮಂದಿರ

ತಡೆಯಾಜ್ಞೆಗೆ ಬಗ್ಗೆ ಮಾಹಿತಿ ಇಲ್ಲ. ಆದರೆ ಭೂಸ್ವಾಧೀನ ಪ್ರಕ್ರಿಯೆ ಇದೀಗ ಅಂತಿಮ ಹಂತಕ್ಕೆ ಬಂದಿದೆ. ಶೀಘ್ರದಲ್ಲೇ ಅದು ಪೂರ್ಣಗೊಳ್ಳಲಿದೆ.

• **ಗಂಗಾಧರ ಚಳಗೇರಿ** ಕಾರ್ಯನಿರ್ವಾಹಕ ಅಭಿಯಂತರ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

ಇದರ ನಡುವೆಯೇ ಆ. 10ರಂದು ಈ ಭಾಗದ ಕಟ್ಟಡಗಳ ಮಾಲೀಕರು ಸಭೆ ನಡೆಸಲಿದ್ದಾರೆ. ಅಂದು 12.30ಕ್ಕೆ ನಡೆಯುವ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಕಟ್ಟಡಗಳ ಮಾಲೀಕರು ನಿರ್ಧರಿಸಿದ್ದಾರೆ. ಅಂದಿನ ಸಭೆಯಲ್ಲಿ ಏನಾಗುತ್ತದೆಯೋ ಎಂಬುದನ್ನು ಕಾಯ್ದು ನೋಡಬೇಕಿದೆ. ಒಟ್ಟಿನಲ್ಲಿ ಲ್ಯಾಮಿಂಗಟನ್ ರಸ್ತೆ (ಸಿದ್ದಪ್ಪ ಕಂಬಳಿ) ಫ್ಲೈಓವರ್ ನಿರ್ಮಾಣಕ್ಕೆ ತೀವ್ರ ಆಕ್ಷೇಪ ವಾಗುತ್ತಿರುವುದಂತೂ ಸತ್ಯ. ಈ ವಿಷಯವೇ ಇದೀಗ ನಗರದಲ್ಲಿ ಭಾರೀ ಚರ್ಚೆಗೆ ಗ್ರಾಸ್‌ವನ್ನುಂಟು ಮಾಡಿದೆ.

ಮಾತೃತ್ವ ರಜೆ ನಂತರವೂ ಸೇವೆಗೆ ಅವಕಾಶ: ಹೈಕೋರ್ಟ್

ಹೊರಗುತ್ತಿಗೆ ಮಹಿಳಾ ನೌಕರರಿಗೆ ಮಾತೃತ್ವ ರಜೆ

• **ಕನ್ನಡಪ್ರಭ ವಾರ್ತೆ** ಧಾರವಾಡ

ಹೊರಗುತ್ತಿಗೆ ಮಹಿಳಾ ನೌಕರರ ರಜೆ ವಿಷಯದಲ್ಲಿ ಇಲ್ಲಿಯ ಹೈಕೋರ್ಟ್ ಏಕಸದಸ್ಯ ಪೀಠವು ಮಹತ್ವದ ತೀರ್ಪೊಂದನ್ನು ನೀಡಿದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹೊರ ಗುತ್ತಿಗೆಯಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಮಾತೃತ್ವ ರಜೆ ನೀಡಬೇಕು. ಈ ರಜೆ ನಂತರ ಮತ್ತೆ ಅವರು ಸೇವೆಗೆ ಹಾಜರಾಗಬಹುದು ಎಂದು ನ್ಯಾಯಮೂರ್ತಿ ಎಂ.ಜಿ.ಎಸ್. ಕಮಲ್ ಅವರಿದ್ದ ಏಕಸದಸ್ಯ ಪೀಠವು ಆದೇಶಿಸಿದೆ. ವಿಜಯನಗರ ಜಿಲ್ಲೆಯ ಹೂವಿನಹಡಗಲಿ ಚಾಂದಬೀ ಬಳಿಗಾರ ಎಂಬುವರು ತಮಗಾದ ಅನ್ಯಾಯ ಪ್ರಶ್ನಿಸಿ ಇಲ್ಲಿಯ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಅವರು 2014ರಲ್ಲಿ ಹೂವಿನಹಡಗಲಿಯಲ್ಲಿ ರೈತ ಸಂಪರ್ಕ ಕೇಂದ್ರದ ಅಕೌಂಟೆಂಟ್ ಆಗಿ ಗುತ್ತಿಗೆ ನೌಕರಿ ಪಡೆದ್ದದರು. ಅಲ್ಲಿಂದ 2023ರ ವರೆಗೆ ಗುತ್ತಿಗೆ ಕಂಪನಿಯ ಆಧಾರದ ಮೇಲೆ ಹೊರಗುತ್ತಿಗೆ ಕೆಲಸ ನಿರ್ವಹಿಸುತ್ತಿದ್ದರು. ಚಾಂದಬೀ ಅವರು ಮಾತೃತ್ವ ರಜೆಗೆ ಅರ್ಜಿ ಕೊಟ್ಟು ಮನೆಗೆ ತೆರಳಿದ್ದರು. ಮಾತೃತ್ವ ರಜೆ ಮುಗಿಸಿ ಬಂದ ಮೇಲೆ ಅವರ ಸ್ಥಾನಕ್ಕೆ ಬೇರೆಯವರನ್ನು ಇಲಾಖೆ ನೇಮಕ ಮಾಡಿತ್ತು. ತಮ ಸೇವೆಗೆ ಅವಕಾಶ ಮಾಡಿಕೊಡಿ ಎಂದು ವಿಜಯನಗರ ಕೃಷಿ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿರಲಿಲ್ಲ. ಇದನ್ನು ಪ್ರಶ್ನಿಸಿ ಧಾರವಾಡ ಹೈಕೋರ್ಟ್‌ಗೆ ಚಾಂದಬೀ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಪೀಠವು ವಾದ-ಪ್ರತಿವಾದ ಆಲಿಸಿ, ಗುತ್ತಿಗೆ ಆಧಾರದ ಮೇಲಿನ ಚಾಂದಬೀ ಅವರ ಮಾತೃತ್ವ ರಜೆ ಒಪ್ಪುವುದು, ರಜೆ ನಂತರ ಮತ್ತೆ ಸೇವೆಗೆ ಮುಂದುವರಿಸುವುದಲ್ಲದೇ ಅವರಿಗಾದ ನಷ್ಟ ಭರಿಸಲು ಸೂಚನೆ ನೀಡಿದೆ.

ಪಾಲಿಕೆಗೆ ಐವರ ನಾಮನಿರ್ದೇಶನ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

▪ ಹುಬ್ಬಳ್ಳಿಯ ಮೂವರು, ಧಾರವಾಡದ ಇಬ್ಬರಿಗೆ ಮಣೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಸರ್ಕಾರ ಐವರನ್ನು ನಾಮನಿರ್ದೇಶಿತ ಸದಸ್ಯರನ್ನಾಗಿ ಮಾಡಿ ಆದೇಶಿಸಿದೆ. ಇದರಲ್ಲಿ ಹುಬ್ಬಳ್ಳಿಯ ಮೂವರು, ಧಾರವಾಡದ ಇಬ್ಬರಿಗೆ ಮಣೆ ಹಾಕಲಾಗಿದೆ. ಮಾಜಿ ಮೇಯರ್ ಆಗಿರುವ ಧಾರವಾಡ ಜಿಲ್ಲಾ ಗ್ರಾಮೀಣ ಕಾಂಗ್ರೆಸ್ ಅಧ್ಯಕ್ಷ ಅನಿಲಕುಮಾರ ಪಾಟೀಲ ಅವರ ಪುತ್ರ ಅರ್ಜುನ ಪಾಟೀಲ್ ಸೇರಿದಂತೆ ಪೂರ್ವ ಕ್ಷೇತ್ರದ ಶ್ರೀನಿವಾಸ ಬೆಳದಡಿ, ಮಹಮ್ಮದ ಆರೀಫ್ ದೊಡ್ಡಮನಿ, ಧಾರವಾಡದ ತುಳಜಪ್ಪ ಪೂಜಾರಿ, ಪಾಲಿಕೆ ಮಾಜಿ ಸದಸ್ಯ ಪ್ರಕಾಶ ಘಾಟಗೆ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಬೆಳಗಾವಿ

ಕ್ರ.ಸಂ.: ಪಂರಾಇಂ/ವಿಬೆ/ಪಿಬಿ–3/ಟೆಂಡರ–10/2024–25/1231 ದಿನಾಂಕ: 07/08/2024

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಗಾಗಿ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1, 2 & 3 ರಲ್ಲಿ ಒಟ್ಟು 15 ಕಾಮಗಾರಿಯ ಟೆಂಡರ್ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ.50.10 ಹಾಗೂ ರೂ. 10.00 ಲಕ್ಷಗಳು ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ ರೂ.1,00,200.00 ಹಾಗೂ 12,750.00 ಗಳು ಇರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ ದಿನಾಂಕ: 20/08/2024 ಸಂಜೆ 17:28 ರೊಳಗಾಗಿ, ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ ದಿನಾಂಕ: 20/08/2024 ಸಂಜೆ 17:30 ಗಂಟೆಯವರೆಗೆ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 22/08/2024 ಸಂಜೆ 11:00 ಗಂಟೆಯ ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 23/08/2024 ರಂದು 11:30 ಗಂಟೆಗೆ ಇರುತ್ತದೆ. ಪರಿಷ್ಕೃತ ವೇಳಾಪಟ್ಟಿ/ ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರು
ಪಂ. ರಾ. ಇಂ. ವಿಭಾಗ, ಬೆಳಗಾವಿ

DIP/BGM/RO No. 574/2024-25

ಕೊಂಕಣ ರೈಲ್ವೆ ನಿಗಮ ನಿಯಮಿತ
(ಭಾರತ ಸರ್ಕಾರದ ಒಂದು ಉದ್ಯಮ)

ಸಾದರ ಸೇವಾ

ಇ– ಟೆಂಡರ್ ಆಹ್ವಾನಿಸುವ ಸೂಚನೆ

ಪ್ರಾದೇಶಿಕ ರೈಲ್ವೆ ವ್ಯವಸ್ಥಾಪಕರು, ಕಾರವಾರ ರವರ ಪರವಾಗಿ ಪ್ರಾದೇಶಿಕ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನಿಯರ್ ರವರು ಕೆಳಗಿನ ಕಾಮಗಾರಿಗಳಿಗಾಗಿ ಭಾರತೀಯ ರೈಲ್ವೆ ಇ–ಪ್ರೊಕ್ಯೂರ್‌ಮೆಂಟ್ ಸಿಸ್ಟಮ್ (ಐಆರ್‌ಇಪಿಎಸ್) ಮೂಲಕ ಮುಕ್ತ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.1: ಕಾಮಗಾರಿಯ ಹೆಸರು: "ಆರ್‌ಡಿಎಸ್‌ಓ/ಎಸ್‌ಪಿಎನ್/ಟಿ/197 ವರ್ಷನ್–1 ಅಥವಾ ಇತ್ತೀಚಿನ ಪ್ರಕಾರ ಕರ್ನಾಟಕ ರಾಜ್ಯದ ಕಾರವಾರ ಪ್ರದೇಶದ 08 ನಿಲ್ದಾಣಗಳಲ್ಲಿ ವಯಸ್ಸು ಮತ್ತು ಸ್ಥಿತಿಯ ಆಧಾರದ ಮೇಲೆ ನಿರ್ವಹಣೆ–ಮುಕ್ತ ಅರ್ಥಿಂಗ್ ಅನ್ನು ಬದಲಾಯಿಸುವುದು – ಅಂಕೋಲಾ, ಗೋಕರ್ಣ, ಮುರ್ಡೇಶ್ವರ, ಶಿರೂರು, ಬಿಜೂರು, ಸೇನಾಪುರ, ಕುಂದಾಪುರ ಮತ್ತು ಬಾರ್ಕೂರು". (ಟೆಂಡರ್ ಸಂಖ್ಯೆ: KR/KARWAR/SG/ET/2024/09 ದಿನಾಂಕ: 09/08/2024)." **ಕಾಮಗಾರಿಯ ವೆಚ್ಚ:** ರೂ.15,39,351/– (ಜಿಎಸ್‌ಟಿ ಸೇರಿಸಿ) **ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ:** 02/09/2024 ರಿಂದ 15:30 ಗಂಟೆಗಳವರೆಗೆ.

ಕ್ರ.ಸಂ.2: ಕಾಮಗಾರಿಯ ಹೆಸರು: ಆರ್‌ಡಿಎಸ್‌ಓ/ಎಸ್‌ಪಿಎನ್/ಟಿ/197 ವರ್ಷನ್–1 ಅಥವಾ ಇತ್ತೀಚಿನ ಪ್ರಕಾರ ಆರ್‌ಡಿಎಸ್‌ಓ/ಎಸ್‌ಪಿಎನ್/ಟಿಸಿ/38–2002 ವರ್ಷನ್–2 ಅಥವಾ ಇತ್ತೀಚಿನ ಪ್ರಕಾರ ಮಡಗಾಂವ್ ಮತ್ತು ಮಜೋರ್ಡಾ ನಿಲ್ದಾಣದಲ್ಲಿ ವಿಎಚ್‌ಎಫ್ ರಿಸೀವರ್ ಕಮ್ ರೆಕಾರ್ಡರ್ ಅನ್ನು ಒದಗಿಸುವುದು – ವಾಯ್ಸ್ ಡೇಟಾ ರೆಕಾರ್ಡಿಂಗ್ ಪ್ರೊಸೆಸಿಂಗ್ ಯುನಿಟ್ (ವಿಡಿಆರ್ ಪಿಯು) (ಟೆಂಡರ್ ಸಂಖ್ಯೆ: KR/KARWAR/SG/ET/2024/08 ದಿನಾಂಕ: 09/08/2024)." **ಕಾಮಗಾರಿಯ ವೆಚ್ಚ:** ರೂ.6,70,000/– (ಜಿಎಸ್‌ಟಿ ಸೇರಿಸಿ) **ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ:** 02/09/2024 ರಿಂದ 15:30 ಗಂಟೆಗಳವರೆಗೆ.

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು **www.ireps.gov.in** ಗೆ ಭೇಟಿ ನೀಡಿ. ಸ್ಥಳ: ಪ್ರಾದೇಶಿಕ ಸಿಗ್ನಲ್ ಮತ್ತು ಟೆಲಿಕಾಂ ಎಂಜಿನಿಯರ್ ರವರ ಕಚೇರಿ, ಕೊಂಕಣ ರೈಲ್ವೇ ನಿಗಮ ನಿಯಮಿತ, ಶಿರವಾಡ, ಕಾರವಾರ–581306 (ಕರ್ನಾಟಕ ರಾಜ್ಯ).

ರಾಜ್ಯಮಟ್ಟದ ಥ್ರೋಬಾಲ್ ಪಂದ್ಯಾವಳಿಗೆ ಚಾಲನೆ

ಥ್ರೋಬಾಲ್ ಪಂದ್ಯಾವಳಿಯಲ್ಲಿ ಪಾಲ್ಗೊಂಡ ಕ್ರೀಡಾಪಟುಗಳು

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಇಲ್ಲಿಯ ಗೋಕುಲ ರಸ್ತೆಯ ಸಂಜೀವಿನಿ ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ ರಾಜೀವ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಪುರುಷ ಹಾಗೂ ಮಹಿಳೆಯರ ಥ್ರೋಬಾಲ್ 2023-24 ಪಂದ್ಯಾವಳಿಗೆ ಗುರುವಾರ ಚಾಲನೆ ದೊರೆಯಿತು.

ರಾಜ್ಯದ ವಿವಿಧ ಜಿಲ್ಲೆಯ ಪುರುಷರು ಹಾಗೂ ಮಹಿಳೆಯರು ಸೇರಿ 81 ತಂಡ ಹಾಗೂ 1300 ಕ್ರೀಡಾ ಸ್ಪರ್ಧಿಗಳು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದಾರೆ. ಗುರುವಾರ ಲೀಗ್ ಹಂತ ಪಂದ್ಯಗಳು ನಡೆದಿದ್ದು 3 ದಿನ ಪಂದ್ಯಾವಳಿ ನಡೆಯಲಿವೆ. ಪಂದ್ಯಾವಳಿಗೆ ಚಾಲನೆ ನೀಡಿದ ಮೇಯರ್ ರಾಮಣ್ಣ ಬಡಿಗೇರ, ಕ್ರೀಡೆಯಿಂದ ಮನುಷ್ಯ ದೈಹಿಕ ಹಾಗೂ ಮಾನಸಿಕ ಸದೃಢವಾಗಲು ಸಾಧ್ಯ. ವಿದ್ಯಾರ್ಥಿಗಳು ಉತ್ತಮ ಹವ್ಯಾಸ ಮೈಗೂಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ವಿಪ ಮಾಜಿ ಸದಸ್ಯ ಮೋಹನ ಲಿಂಬಿಕಾಯಿ, ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಗುರಿ ಹಾಗೂ ಸಾಧನೆಗಳ ಮಹತ್ವದ ಅರಿವಾಗುತ್ತದೆ. ಸಾಧಿಸಬೇಕೆಂಬ ಛಲ ಹೆಚ್ಚುತ್ತದೆ ಎಂದು ತಿಳಿಸಿದರು.

ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಡಾ. ಶ್ರೀನಿವಾಸ ಬನ್ನಿಗೋಳ ಮಾತನಾಡಿದರು. ಪ್ರಾಂಶುಪಾಲ ಡಾ. ಚರಂತಯ್ಯ ಹಿರೇಮಠ, ವಿದ್ಯಾರ್ಥಿ ಸಂಘದ ಅಧ್ಯಕ್ಷ ಡಾ. ಗೌರೀಶ ಅಸೂಟಿ, ಕ್ರೀಡಾಧ್ಯಕ್ಷ ಡಾ. ರಾಮ ತೇಗೂರ, ಸಂಸ್ಥೆಯ ಕಾರ್ಯದರ್ಶಿ ಡಾ. ಸೋಮಶೇಖರ ಹುದ್ದಾರ ಸೇರಿದಂತೆ ಇತರರು ಇದ್ದರು.

ಎಟಿಎಂ ಕಾರ್ಡ್ ಕದ್ದು ಪರಾರಿಯಾದ ಕಳ್ಳನ ಬಂಧನ

ಕಲಘಟಗಿ: ಪಟ್ಟಣದಲ್ಲಿ ಎಟಿಎಂ ಕಾರ್ಡ್ ಕಸಿದುಕೊಂಡು ಹಣ ದೋಚಿ ಪರಾರಿಯಾಗಿದ್ದ ಓರ್ವ ಆರೋಪಿಯನ್ನು ಬಂಧಿಸುವಲ್ಲಿ ಕಲಘಟಗಿ ಠಾಣೆಯ ಪೊಲೀಸರು ಯಶಸ್ವಿಯಾಗಿದ್ದಾರೆ. ಹಳೇ ಹುಬ್ಬಳ್ಳಿಯ ಆಸ್ಕಕ ತಳವಾಯಿ ಬಂಧಿತ ಆರೋಪಿ. ಇತ ಪಟ್ಟಣದ ಗಾಂಧಿನಗರದ ನಿವಾಸಿ ರಾಜು ದೊಡ್ಡಮನಿ ಎಂಬುವರು ಆ. 1ರಂದು ಸೆಂಟ್ರಲ್ ಬ್ಯಾಂಕ್ ಹತ್ತಿರ ನಿಂತುಕೊಂಡಾಗ ಆರೋಪಿ ಪರ್ಸ್‌ನಲ್ಲಿದ್ದ ₹ 1 ಸಾವಿರ ಹಾಗೂ ಎಸ್‌ಬಿಐ ಎಟಿಎಂ ಕಾರ್ಡ್ ಕಸಿದುಕೊಂಡು ಪರಾರಿಯಾಗಿ ₹ 22 ಸಾವಿರ ಡ್ರಾ ಮಾಡಿಕೊಂಡಿದ್ದ. ಈ ಕುರಿತು ಕಲಘಟಗಿ ಪೊಲೀಸ್ ಠಾಣೆಯಲ್ಲಿ ಆ. 7ರಂದು ಪ್ರಕರಣ ದಾಖಲಾಗಿತ್ತು. ಇನ್‌ಸ್ಪೆಕ್ಟರ್ ಶ್ರೀಶೈಲ ಕೌಜಲಗಿ ನೇತೃತ್ವದ ತಂಡ ಆಸ್ಕಕ ತಳವಾಯಿಯನ್ನು ಗುರುವಾರ ಬಂಧಿಸಿದೆ. ಆತನಿಂದ ₹ 15000 ನಗದು ಹಾಗೂ ಒಂದು ಕಾರು ವಶಪಡಿಸಿಕೊಳ್ಳಲಾಗಿದೆ. ಎಸ್ಪಿ ಗೋಪಾಲ ಬ್ಯಾಕೋಡ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದಿದೆ.

ನಿಧನ

ಕೊಳಲು ವಾದಕ ವೇಣುಗೋಪಾಲ ಹೆಗಡೆ

ಯಲ್ಲಾಪುರ: ಧಾರವಾಡದ ರಾಧಾಕೃಷ್ಣ ನಗರದ ವಾಸಿ, ತಾಲೂಕಿನ ಉಮ್ಮಚಗಿ ಗ್ರಾಪಂ ವ್ಯಾಪ್ತಿಯ ಕನೇನಹಳ್ಳಿ- ಬಂಡೀಮನೆಯ



ಮೂಲನಿವಾಸಿ, ಖ್ಯಾತ ಯುವ ಬಾನ್ಸುರಿ (ಕೊಳಲು) ವಾದಕ ವೇಣುಗೋಪಾಲ ಎಸ್. ಹೆಗಡೆ (40) ಆ. 7ರಂದು ನಿಧನರಾದರು. ಕೆಲಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಆಸ್ಪತ್ರೆಯಲ್ಲಿಯೇ ಕೊನೆಯುಸಿರೆಳೆದರು. ಪಾರ್ಥಿವ ಶರೀರವನ್ನು ಧಾರವಾಡದ ಅವರ ನಿವಾಸಕ್ಕೆ ತಂದು ನಂತರ ಅಂತ್ಯಕ್ರಿಯೆ ನೆರವೇರಿಸಲಾಯಿತು. ಮೃತರಿಗೆ ತಾಯಿ, ಪತ್ನಿ, ಪುತ್ರ, ಓರ್ವ ಸಹೋದರ ಹಾಗೂ ಅಪಾರ ಬಂಧು- ಬಳಗವಿದೆ.

ಸಾವಿತ್ರಿ ದಿಂಡಲಕೊಪ್ಪ

ಧಾರವಾಡ: ತಾಲೂಕಿನ ಯಾದವಾಡ ಗ್ರಾಮದ ನಿವಾಸಿ ಸಾವಿತ್ರಿ (ಸಾವಮ್ಮ) ಮಹಾದೇವಪ್ಪ ದಿಂಡಲಕೊಪ್ಪ



(82) ಬುಧವಾರ ನಿಧನರಾದರು. ಮೃತರಿಗೆ ಪುತ್ರ, ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವಿದೆ.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
(ಒಂದು ನಿಗದಿತ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಚೇರಿ: ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ.10/1, 11/2 ಮತ್ತು 12/2ಬಿ, ದೊಮ್ಮಲೂರ್, ಕೋರಮಂಗಲ ಒಳವರ್ತುಲ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ಪಕ್ಕ, ಚಲ್ಲಘಟ್ಟ, ಬೆಂಗಳೂರು–560071.

ಸರ್ಫೇಸಿ ಆಕ್ಟ್, 2002ರ ಸೆಕ್ಷನ್ 13(2) ಅಡಿಯಲ್ಲಿ ತಗಾದೆ ಸೂಚನೆ

ಈ ಕೆಳಗೆ ತಿಳಿಸಲಾದ ಸಾಲಗಾರರು, ಸಹ–ಸಾಲಗಾರರು, ಜಾಮೀನುದಾರರು ಮತ್ತು ಅಡಮಾನದಾರರು ನಿಮ್ಮ ಸ್ಥಿರಾಸ್ತಿಯನ್ನು ಅಡಮಾನವಿಟ್ಟು **ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**‌ನಿಂದ ಸಾಲವನ್ನು ಪಡೆದಿದ್ದೀರಿ. ನೀವೆಲ್ಲರೂ ಹಣವನ್ನು ಮರುಪಾವತಿಸದ ಕಾರಣ, ನಿಮ್ಮ ಸಾಲದ ಖಾತೆಯನ್ನು **ಅನುತ್ಪಾದಕ ಆಸ್ತಿ** ಎಂದು ವರ್ಗೀಕರಿಸಲಾಗಿದೆ, ಆದರೆ ಸುರಕ್ಷಿತ ಕಾಯಿದೆಯಡಿಯಲ್ಲಿ **ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್** ಸಾಲದಾತರಾಗಿರುತ್ತಾರೆ. ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002ರ ನಿಯಮ 2ರ ಅನ್ವಯ ಸೆಕ್ಷನ್ 13(2)ರ ಅಡಿಯಲ್ಲಿ ನಿಹಿತವಾದ ಅಧಿಕಾರಗಳನ್ನು ಚಲಾಯಿಸಿ ಕಾಲಂ ನಂ.2ರಲ್ಲಿ ನಮೂದಿಸಿರುವಂತೆ ಸಾಲಗಾರರು/ಸಹ–ಸಾಲಗಾರರು/ಜಾಮೀನುದಾರರು/ಅಡಮಾನದಾರರಿಗೆ ನೋಟೀಸ್‌ನಲ್ಲಿ ನಮೂದಿಸಿರುವ ಮೊತ್ತವನ್ನು ಮುಂದಿನ ಬಡ್ಡಿಯೊಂದಿಗೆ ಮರುಪಾವತಿಸುವಂತೆ ಬೇಡಿಕೆಯ ಸೂಚನೆಯನ್ನು ಸೂಚನೆಯ ದಿನಾಂಕದಿಂದ **60** ದಿನಗಳಲ್ಲಿ, ಹೊರಡಿಸಿದೆ. ಆದರೆ ಕಾರಣಾಂತರಗಳಿಂದ ಕೆಲವರಿಗೆ ನೋಟೀಸ್ ಜಾರಿ ಮಾಡಲು ಸಾಧ್ಯವಾಗಿಲ್ಲ.

ಕ್ರ ಸಂ.	ಸಾಲಗಾರರ/ಸಹ–ಸಾಲಗಾರರ/ ಜಾಮೀನುದಾರರ/ ಅಡಮಾನದಾರರ ಹೆಸರು	ಸಾಲದ ಖಾತೆ ಸಂಖ್ಯೆ & ಸಾಲದ ಮೊತ್ತ	ಭದ್ರತಾ ಆಸ್ತಿಯ ವಿವರಗಳು	ಎನ್‌ಪಿಎ ದಿನಾಂಕ ಮತ್ತು ಡಿಮ್ಯಾಂಡ್ ನೋಟೀಸ್ ದಿನಾಂಕ	ಬಾಕಿ ಮೊತ್ತ ರೂ. ದಿನಾಂಕದಂತೆ
1.	1) ಶ್ರೀ ಮೌಲಾಸಾಬ್ ಬುಕ್ಕಿಟಗಾರ್, ಹಾಗೂ ವಿಳಾಸ: ಧವಲಮಾಲಿಕ್ ಹೋಟೆಲ್, 2) ಶ್ರೀ ಸಲೀಂಸಾಬ್ ಬುಕ್ಕಿಟಗಾರ್, ಹಾಗೂ ವಿಳಾಸ: ಧವಲಮಾಲಿಕ್ ಎಗ್ ರೈಸ್ ಸೆಂಟರ್	ಸಾಲದ ಖಾತೆ ಸಂಖ್ಯೆ 45449420000209 30319420000087 ಸಾಲದ ಮೊತ್ತ: ರೂ. 9,70,787/– ರೂ. 3,66,128/–	ಅಡಮಾನ ಇಟ್ಟಿರುವ ಸ್ಥಿರಾಸ್ತಿ: ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಹೊಂದಿರುವ ಸ್ಥಿರಾಸ್ತಿ ಸಂಖ್ಯೆ.151300400600100850, ಹಳೆಯ ವಿಪಿಸಿ ನಂ.453/34/2, ಒಟ್ಟು 111.48 ಚದರ ಮೀಟರ್‌ಗಳು (ಪೂರ್ವದಿಂದ ಪಶ್ಚಿಮಕ್ಕೆ 6.096 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: 18.48 ಮೀಟರ್). ಕುಂದಗೋಳ ತಾಲೂಕಿಗೆ ಬರುವ ಹಿರೇನರ್ತಿ ಗ್ರಾಮ ಮತ್ತು ಗ್ರಾ.ಪಂ. ಕುಂದಗೋಳ ಉಪನೋಂದಣಾಧಿಕಾರಿ ಹಿರೇನರ್ತಿ ವ್ಯಾಪ್ತಿಯಲ್ಲಿ ಬರುತ್ತದೆ. ಚಕ್ಕುಬಂದಿ:– ಪೂರ್ವಕ್ಕೆ: ಹುಲಗಪ್ಪ ಮರೆಲ್ಲಪ್ಪ ಸುಳ್ಳದ್ ರವರ ಆಸ್ತಿ, ಪಶ್ಚಿಮಕ್ಕೆ: ಶ್ರೀ ಹಸನ್ಸಾಬ್ ದಾವಲ್ಸಾಬ್ ಲತೀಬ್ಖಾನ್ ರವರ ಮನೆ, ಉತ್ತರಕ್ಕೆ: ಸರ್ಕಾರ. ರಸ್ತೆ & ದಕ್ಷಿಣಕ್ಕೆ: ಈಶಪ್ಪ ಬಸಪ್ಪಬುಜಂಗನವರ್ ರವರ ಮನೆ.	ಎನ್‌ಪಿಎ ದಿನಾಂಕ: 01–06–2024 ಡಿಮ್ಯಾಂಡ್ ನೋಟೀಸ್ ದಿನಾಂಕ: 05–08–2024	ರೂ. 13,67,397.5 (ರೂಪಾಯಿ ಹದಿಮೂರು ಲಕ್ಷದ ಅರವತ್ತೇಳು ಸಾವಿರದ ಮೂರು ನೂರ ತೊಂಭತ್ತೇಳು ಮತ್ತು ಐವತ್ತು ಪೈಸೆ ಮಾತ್ರ) ದಿ: 31.07.2024 ರಂತೆ ಬಾಕಿಗಳು.
2.	1) ಶ್ರೀ ಸರ್ಫ್ರಾಜ್ ರಿಯಾಜ್ ಅಹ್ಮದ್ ಪಲ್ಲನ್, 2) ಶ್ರೀ ರಿಯಾಜ್ ಅಹ್ಮದ್ ಪಲ್ಲನ್, 3) ಶ್ರೀಮತಿ ಕೌಸರ್ ಬಾನು ಪಲ್ಲನ್	ಸಾಲದ ಖಾತೆ ಸಂಖ್ಯೆ 45449420000630 ಸಾಲದ ಮೊತ್ತ: ರೂ.15,70,000/–	ಅಡಮಾನ ಇಟ್ಟಿರುವ ಸ್ಥಿರಾಸ್ತಿ: ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಹೊಂದಿರುವ ಸ್ಥಿರಾಸ್ತಿ ಪ್ಲಾಟ್ ನಂ.19, ಸರ್ವೆ ನಂ.42/2ಎ, ಮುನಿಸಿಪಲ್ ವಾರ್ಡ್ ನಂ.67, ಪಿಐಡಿ ನಂ.67/9314, ಮುನಿಸಿಪಲ್ ಸಂ.42/2ಎ/19, ಜೈನ್ ಪ್ಲಾಟ್‌ಗಳು, ಬಿಡ್ನಾಲ್ ಎಲೆಕ್ಟ್ರಿಕಲ್ ಸಬ್ ಸ್ಟೇಷನ್ ಹತ್ತಿರ, ಹಳಿಯಾಳ ರಸ್ತೆ, ಬಿಡ್ನಾಳ್ (ವಿ) ಗ್ರಾಮ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ–580020. ಚಕ್ಕುಬಂದಿ:– ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನೀಲಗುಂದದ ಪ್ಲಾಟ್, ಉತ್ತರಕ್ಕೆ: ಪ್ಲಾಟ್ ನಂ.18 & ದಕ್ಷಿಣಕ್ಕೆ: ಪ್ಲಾಟ್ ನಂ.20.	ಎನ್‌ಪಿಎ ದಿನಾಂಕ: 01–08–2024 ಡಿಮ್ಯಾಂಡ್ ನೋಟೀಸ್ ದಿನಾಂಕ: 05–08–2024	ರೂ.15,72,599.80 (ರೂಪಾಯಿ ಹದಿನೈದು ಲಕ್ಷದ ಎಪ್ಪತ್ತೆರಡು ಸಾವಿರದ ಐದು ನೂರ ತೊಂಭತ್ತೊಂಭತ್ತು ಮತ್ತು ಎಂಭತ್ತು ಪೈಸೆ ಮಾತ್ರ) ದಿ: 04.08.2024 ರಂತೆ ಬಾಕಿಗಳು.

ಆದ್ದರಿಂದ ಕಾಲಂ ನಂ.2 ರಲ್ಲಿ ನಮೂದಿಸಿರುವಂತೆ ಸಾಲಗಾರರ/ ಸಹ–ಸಾಲಗಾರರ/ ಜಾಮೀನುದಾರರು ಮತ್ತು ಅಡಮಾನದಾರರಿಗೆ ಸೂಚನೆಯನ್ನು ನೀಡಲಾಗಿದೆ, ಕಾಲಂ ನಂ.6 ರಲ್ಲಿ ತಿಳಿಸಿರುವಂತೆ ಒಟ್ಟು ಮೊತ್ತವನ್ನು ಪಾವತಿಸಲು ಸಾಲಗಾರರಿಗೆ ತಿಳಿಸಲಾಗಿದೆ. ಈ ಸೂಚನೆಯನ್ನು ಪ್ರಕಟಿಸಿದ **60 ದಿನಗಳ** ಒಳಗಾಗಿ ಎಲ್ಲಾ ಆಯಾ ಸಾಲಗಾರ/ಸಹ–ಸಾಲಗಾರರ ವಿರುದ್ಧ ಕಾಲಂ ನಂ. 6 ರಲ್ಲಿ ತೋರಿಸಿರುವ ದಿನಾಂಕದಂದು ಆಯಾ ಸಾಲದ ಖಾತೆಗೆ ಸಂಬಂಧಿಸಿದಂತೆ ತಿಳಿಸಲಾದ ಮೊತ್ತವನ್ನು ಪಾವತಿಸಲಾಗುವುದು. ಮುಂದಿನ ಬಡ್ಡಿ ಮತ್ತು ಪಾವತಿಸಿದ ದಿನಾಂಕದವರೆಗೆ ಪಾವತಿಸಬಹುದಾದ ಇತರ ಮೊತ್ತಗಳೊಂದಿಗೆ ಒಟ್ಟು ಮೊತ್ತವನ್ನು ಪಾವತಿಸಬೇಕಾಗಿದೆ, ಪಾವತಿಸಲಾಗದಿದ್ದಲ್ಲಿ, **ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**‌ನ್ನು ಕಾಲಂ ನಂ.4 ರಲ್ಲಿ ವಿವರಿಸಿದಂತೆ ಆಸ್ತಿಗಳ ಮೇಲಿನ ಭದ್ರತಾ ಹಿತಾಸಕ್ತಿ ಜಾರಿಗಾಗಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ನಿಯಮ 13(13)ರಡಿ ಸಾಲಗಾರರ/ಸಹ–ಸಾಲಗಾರರ/ ಜಾಮೀನುದಾರರ/ ಅಡಮಾನದಾರರ ವಿರುದ್ಧ **ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**‌ಗೆ ಲಭ್ಯವಿರುವ ಹಕ್ಕುಗಳು ಮತ್ತು ಪರಿಹಾರಗಳಿಗೆ ಯಾವುದೇ ಪೂರ್ವಾಗ್ರಹವಿಲ್ಲದೆ ಈ ಪ್ರಕಟಣೆಯನ್ನು ಸೂಚಿಸಲಾಗಿದೆ. ಈ ಮೇಲಿನ ಭದ್ರತೆಯನ್ನು ವಿಲೇವಾರಿ ಮಾಡುವುದರಿಂದ ಅಥವಾ ವ್ಯವಹರಿಸುವುದರಿಂದ ಅಥವಾ ಮಾರಾಟದ ಮೂಲಕ ವರ್ಗಾಯಿಸುವುದರಿಂದ ನಿಮ್ಮನ್ನು ನಿರ್ಬಂಧಿಸಲಾಗಿದೆ/ನಿಷೇಧಿಸಲಾಗಿದೆ. ಸುರಕ್ಷಿತ ಸಾಲಗಾರರ ಪೂರ್ವಾನುಮತಿಯಿಲ್ಲದೆಯೇ ಸುಭದ್ರ ಆಸ್ತಿಯ ಗುತ್ತಿಗೆ ಅಥವಾ ಬೇರೆ ರೀತಿಯಲ್ಲಿ ಮಾರಾಟ ಮಾಡಲಾಗುವುದು.

ದಿನಾಂಕ: 09.08.2024, ಸ್ಥಳ: ಧಾರವಾಡ — ಸಹಿ/– ಅಧಿಕೃತ ಅಧಿಕಾರಿಗಳು, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಪರವಾಗಿ

G and W No: 133/2024

IN THE COURT OF HON'BLE IVTH ADDL. SENIOR CIVIL JUDGE AND CJM DHARWAD, AT DHARWAD

Petitioners: 1 Vivek S/o Santosh Kumar Patil, Age: 12 years, Occu: Student, R/o : Harobelavadi, Tal and Dist: Dharwad.
2. Santosh Kumar S/o Rajashekhar Patil, Age: 46 years, Occupation: Agriculture Since Petitioner no 1 is minor represented by his Father petitioner no 2

V/s

Respondent: Nill

NOTICE UNDER ORDER V RULE 20 OF C.P.C.

WHEREAS, the above named Petitioner has filed the above mentioned petition for Appointment of Minor Guardian of **Vivek Santosh Kumar Patil** for person and properties. Therefore, anybody claiming any right or interest on above mentioned subject, they may be directed to appear in person or through duly authorized lawyer before this court on 13-9-2024 at 10-30 A.M. before this Hon'ble Court failing which the matter will be decided in your absence.

Given under my hand and the seal of the Court on this day 7-8-2024.

By Order of the Court
Sd/- Sheristedar
VI Addl. Senior Civil Judge & CJM Court Dharwad

Sd/- (**Smt. S.G. Hiremath/Pralayakalmath**)
Advocate for Petitioner

ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ: ಎಚ್‌ಇ–ಟಿಆರ್‌ಡಿ–2024–25–ಒಟಿ–20 ದಿನಾಂಕ: 02.08.2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ:
ಹುಬ್ಬಳ್ಳಿ ವಿಭಾಗದಲ್ಲಿ ಇನ್ಸುಲೇಟೆಡ್ ಓವರ್‌ಲ್ಯಾಪ್‌ಗಳ ಸ್ಥಳಾಂತರಕ್ಕಾಗಿ ಓಎಚ್‌ಇ ಮಾರ್ಪಾಡು	ರೂ. 2,00,33.827/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 30.08.2024 ರಂದು 15:00 ಗಂಟೆಗಳವರೆಗೆ**

ಹೆಚ್ಚಿನ ಮಾಹಿತಿಗಳಿಗಾಗಿ: **www.ireps.gov.in** ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ (ಟ್ರಾಕ್ಷನ್ ಡಿಸ್ಟ್ರಿಬ್ಯೂಷನ್)

ಪಿಯುಬಿ/328/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2024–25 ಹುಬ್ಬಳ್ಳಿ

South Western Railway - SWR SWRRLY SWRRLY

ನೈರುತ್ಯ ರೈಲ್ವೆ

ವಾಕ್ ಇನ್ ಇಂಟರ್‌ವ್ಯೂ
ಅಧಿಸೂಚನೆ ಸಂಖ್ಯೆ 01/2024–25

ಹುಬ್ಬಳ್ಳಿಯ ಸೆಂಟ್ರಲ್ ಆಸ್ಪತ್ರೆಯಲ್ಲಿ ಹಿರಿಯ ಹೌಸ್ ಸರ್ಜನ್ ನೇಮಕಾತಿಗಾಗಿ ವಾಕ್ ಇನ್ ಇಂಟರ್‌ವ್ಯೂಅನ್ನು ನೈರುತ್ಯ ರೈಲ್ವೆಯ ಸೆಂಟ್ರಲ್ ಆಸ್ಪತ್ರೆ, ಗದಗ ರಸ್ತೆ, ಹುಬ್ಬಳ್ಳಿಯಲ್ಲಿ 19.08.2024 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.00 ರವರೆಗೆ ನಡೆಸಲಾಗುತ್ತಿದೆ. ಹಿರಿಯ ಹೌಸ್ ಸರ್ಜನ್‌ಗೆ ಬೇಕಾದ ಅರ್ಹತೆ, ವಯಸ್ಸು, ಅವಧಿ ಇತ್ಯಾದಿಗಳನ್ನು ಈ ಕೆಳಗೆ ತಿಳಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಈ ಕೆಳಗಿನ ದಾಖಲೆಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬಹುದು.

ಹುದ್ದೆಗಳ ಸಂಖ್ಯೆ	: 04
ಅರ್ಹತೆ	: ಎಂಬಿಬಿಎಸ್
ವಯಸ್ಸು	: 37 ವರ್ಷಗಳವರೆಗೆ.
ಸಂಭಾವನೆ	: ರೂ.45,000/–ತಿಂಗಳಿಗೆ.
ಅವಧಿ	: ನೇಮಕಾತಿ ದಿನಾಂಕದಿಂದ ಪ್ರತಿ ಅವಧಿಯ ಆರು ತಿಂಗಳುಗಳು (ಒಟ್ಟು ಎರಡು ವರ್ಷಗಳು–ಆರು ತಿಂಗಳು ಪ್ರತಿ ಅವಧಿ)

ದಾಖಲೆಗಳು: ಅರ್ಜಿ, ಅಂಕಪಟ್ಟಿ, ನೋಂದಣಿ ಪ್ರಮಾಣಪತ್ರ, ಅನುಭವ ಪ್ರಮಾಣಪತ್ರ, ಇತರೆ ಯಾವುದಾದರೂ ಇದ್ದರೆ ಮೂಲ ಮತ್ತು ಒಂದು ಸೆಟ್ ಝೆರಾಕ್ಸ್ ಪ್ರತಿ

ಹೆಚ್ಚಿನ ವಿವರಗಳಿಗಾಗಿ 17.08.2024 ರವರೆಗಿನ ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 6.00 ರವರೆಗೆ ಕೆಳಗೆ ಸಹಿ ಮಾಡಿದವರ ಕಚೇರಿಯನ್ನು ಸಂಪರ್ಕಿಸಿ. ಅಧಿಸೂಚನೆಯನ್ನು ವೆಬ್‌ಸೈಟ್ www.swrindianrailways.gov.in ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

ವೈದ್ಯಕೀಯ ನಿರ್ದೇಶಕರು ಸೆಂಟ್ರಲ್ ಆಸ್ಪತ್ರೆ, ಹುಬ್ಬಳ್ಳಿ

ಪಿಯುಬಿ/332/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2024–25

South Western Railway - SWR SWRRLY SWRRLY

CHANGE OF NAME

As per my client Ishwaragouda Goudappagoudar his Daughter Previous name was Ganga Goudappagoudar it was changed before the Principal Civil Judge & JMFC Court Dharwad the vide affidavit dated: 08-08-2024 changed as Lavanya Ishwaragouda Goudappagoudar it is published daily news paper my daughter name Hence forth called and continue this name only **Lavanya Ishwaragouda Goudappagoudar.**

Dharwad 08-08-2024 — Sd/- **D.H. Chidananda** Advocate, Dharwad.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
(ಒಂದು ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು–560071.

ಇ–ಹರಾಜು ಸೂಚನೆ

2002ರ ಭದ್ರತಾ ಹಿತಾಸಕ್ತಿ ನಿಯಮಗಳ ಪ್ರಾವಿಸೋ ರೂಲ್ 8(6) ಮತ್ತು 9 ರೊಂದಿಗೆ ಓದಿಕೊಳ್ಳಬೇಕಾದ ಸೆಕ್ಯುರೈಟೆಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಸರ್ಫೇಸಿ ಕಾಯಿದೆ), 2002ರಡಿ ಆಸ್ತಿಗಳ ಇ–ಹರಾಜು ಮಾರಾಟಕ್ಕಾಗಿ ಸಾರ್ವಜನಿಕ ಸೂಚನೆ

ಆದಾಗ್ಯೂ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸರ್ಫೇಸಿ ಕಾಯಿದೆಯ ಕಲಂ 13(4)ರಡಿ ಕೆಳಕಂಡ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಮಾಹಿತಿ ನೀಡುವುದೇನೆಂದರೆ ಸಾಲ ಪಡೆಯಲು ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳನ್ನು ಬ್ಯಾಂಕಿಗೆ ಬಾಕಿಯಾಗಿರುವ ಸಾಲಗಳ ವಸೂಲಾತಿಗಾಗಿ ''ಎಲ್ಲಿ ಹೇಗಿದೆಯೋ ಹಾಗೆಯೇ'' ಹಾಗೂ ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ ಸರ್ಫೇಸಿ ಕಾಯಿದೆಯಂತೆ ಇ-ಹರಾಜು ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲದ ಖಾತಾ ಸಂಖ್ಯೆ	ಮೂಲ ಸಾಲಗಾರ/ ಸಹ–ಸಾಲಗಾರ/ಜಾಮೀನುದಾರ/ಹೆಸರು	13–2 ನೋಟೀಸ್ ದಿನಾಂಕ	ಸ್ವಾಧೀನತೆಯ ದಿನಾಂಕ	ಪ್ರಸ್ತುತ ಬಾಕಿ ಮೊತ್ತ ದಿನಾಂಕ 08.08.2024 ರಂದು ಇದ್ದಂತೆ	ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ	ಮೀಸಲು ಬೆಲೆ ಐಎನ್‌ಆರ್	ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಂಡಿ) ಐಎನ್‌ಆರ್	ಇ–ಹರಾಜಿನ ದಿನಾಂಕ ಮತ್ತು ಸಮಯ	ಬಿಡ್ ಸಲ್ಲಿಸಲು ಸ್ಥಳ ಮತ್ತು ಕೊನೆಯ ದಿನಾಂಕ ಮತ್ತು ಸಮಯ
1	30318640000246	1) ಮೆ|| ರಾಜ್ ಲಕ್ಷ್ಮಿ ಅಫ್ಫಿಷಿಯನ್ಸ್, ಇದರ ಪ್ರತಿನಿಧಿತ ಮಾಲೀಕರು ಶ್ರೀ ಮಹಾವೀರ್ ದೌಲತ್‌ರಾಜ್ ಜೈನ್, 2) ಶ್ರೀ ಮಹಾವೀರ್ ದೌಲತ್‌ರಾಜ್ ಜೈನ್, ಮಾಲೀಕರು ಮೆ|| ರಾಜ್ ಲಕ್ಷ್ಮಿ ಅಫ್ಫಿಷಿಯನ್ಸ್, ಅಲ್ಲದೇ: ಮೆ|| ರಾಜ್ ಲಕ್ಷ್ಮಿ ಅಫ್ಫಿಷಿಯನ್ಸ್, 3) ಶ್ರೀಮತಿ ಸರೋಜಾದೇವಿ ಮಹಾವೀರ್ ಜೈನ್ 4) ಶ್ರೀ ಸುರೇಶ್ ಡಿ ಜೈನ್	07-02-2022	29-07-2024	ರೂ. 53,47,854.78 (ಐವತ್ಮೂರು ಲಕ್ಷದ ನಲವತ್ತೇಳು ಸಾವಿರದ ಎಂಟುನೂರ ಐವತ್ತನಾಲ್ಕು ರೂ. ಮತ್ತು ಎಪ್ಪತ್ತೆಂಟು ಪೈಸೆ ಮಾತ್ರ)	23.08.2024 Time: 09:30 AM to 5:00 PM	ರೂ. 32,76,000/- (ಮೂವತ್ತೆರಡು ಲಕ್ಷದ ಎಪ್ಪತ್ತಾರು ಸಾವಿರ ರೂ. ಮಾತ್ರ)	ರೂ. 3,27,600/- (ಮೂರು ಲಕ್ಷದ ಇಪ್ಪತ್ತೇಳು ಸಾವಿರದ ಆರುನೂರು ರೂ. ಗಳು ಮಾತ್ರ)	09.09.2024 @ 02:00 PM	07.09.2024, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಮುಖ್ಯ ಕಛೇರಿ: ದಿ ಫೇರ್‌ವೇ, ನೆಲಮಹಡಿ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071.

ಭದ್ರತಾ ಆಸ್ತಿಗಳ ವಿವರಣೆ: ಸಕಲ ಸಮಸ್ತವೂ ಸೇರಿದ ವಾಣಿಜ್ಯ ಆಸ್ತಿ ಶಾಪ್ ಸಂ. ಎಸ್‌ಎ-4, ಎರಡನೇ ಮಹಡಿ, ನಿರ್ಮಿಸಲಾಗಿರುವ ಸಿಟಿಎಸ್ ಸಂ. 2611/1, 2611/2 ಮತ್ತು 2611/3, ವಾರ್ಡ್ ಸಂ. 1, ಆದಿತ್ಯ ಅನೆಕ್ಸ್, ಸಿಯೋನ್ ರಸ್ತೆ, ಹುಬ್ಬಳ್ಳಿ- 580020, ಪ್ರದೇಶದ ಅಳತೆ ಈ ರೀತಿ ಇದೆ: 1) ಸಿಟಿಎಸ್ ಸಂ. 2611/1 ಅಳತೆ- 187 1/9 ಚದರ ಗಜ ಅಥವಾ 156.45 ಚ.ಮೀ. 2) ಸಿಟಿಎಸ್ ಸಂ. 2611/2 ಅಳತೆ- 98 ಚದರ ಗಜ ಅಥವಾ 81.94 ಚ.ಮೀ. ಮತ್ತು 3) ಸಿಟಿಎಸ್ ಸಂ. 2611/3 ಅಳತೆ- 50.91 ಚ.ಮೀ.ಗಳು, ಒಟ್ಟಾರೆ ನಿರ್ಮಿತ ಪ್ರದೇಶದ ಅಳತೆ- 794 ಚ.ಅ. ಮತ್ತು 6.770%ನಲ್ಲಿ ಅಂದರೆ 213.20ಚ.ಅ. ಅವಿಭಜಿತ ಪಾಲು. ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ಸಂ. 2612 ರಿಂದ 22617 ಮತ್ತು 2634/5, ಪಶ್ಚಿಮಕ್ಕೆ: ಸಿಟಿಎಸ್ ಸಂ. 2633ಎ/1, 2633ಬಿ/1, 2633ಸಿ/1 ಮತ್ತು 2630ರ ಅಡಿಯಲ್ಲಿ ಒಳಗೊಂಡಿರುವ ಆಸ್ತಿ, ಉತ್ತರಕ್ಕೆ: ಸಿಯೋನ್ ರಸ್ತೆ, ದಕ್ಷಿಣಕ್ಕೆ: ಬನಿಯೊನ್ ರಸ್ತೆ.

ಆಸ್ತಿಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಮಾರಾಟ ಮಾಡಲಾಗುವುದು. ಇ-ಹರಾಜನ್ನು 'ಆನ್ ಲೈನ್' ಮೂಲಕ ನಡೆಸಲಾಗುತ್ತದೆ. ಹರಾಜನ್ನು ಬ್ಯಾಂಕ್ ಅಂಗೀಕೃತ ಸೇವಾ ಒದಗಿಸುವವರಾದ **ಮೆ||-4 ಕ್ಲೋಸರ್** ಮೂಲಕ **https://bankauctions.in & www.foreclosureindia.com.** ಎಂಬುವ ವೆಬ್‌ಪೋರ್ಟಲ್‌ನಲ್ಲಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮತ್ತು ವಿವರಗಳಿಗಾಗಿ, ನೆರವಿಗಾಗಿ, ಕ್ರಮಗಳ ತಿಳಿದುಕೊಳ್ಳುವುದಕ್ಕಾಗಿ ಮತ್ತು ಇ-ಹರಾಜು ಆನ್‌ಲೈನ್ ತರಬೇತಿ ಪಡೆದುಕೊಳ್ಳುವುದಕ್ಕಾಗಿ ಭಾವಿ ಬಿಡ್‌ದಾರರು ಮೆ||-4 ಕ್ಲೋಸರ್ ಸಂಪರ್ಕ ಶ್ರೀ ಎಂ ಶ್ರೀನಿವಾಸಲು, ಸಂಪರ್ಕ ಸಂ. **8142000809. Email id: info@bankauctions.in / srinivas@bankauctions.in.** ಇವರನ್ನು ಸಂಪರ್ಕಿಸುವುದು. ಷರತ್ತು ಮತ್ತು ನಿಬಂಧನೆಗಳ ಹೆಚ್ಚಿನ ವಿವರಗಳಿಗಾಗಿ ಹಾಗೂ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಿ ಹಾಗೂ ಆಸ್ತಿ ಸಂಬಂಧಿತ ಯಾವುದೇ ವಿವರಗಳಿಗಾಗಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳಾದ ಶ್ರೀ ರಂಜನ್ ನಾಯಕ್, (**ಮೊ.ಸಂ. 9590858249**), ಶ್ರೀ ಉಮೇಶ್ (**ಮೊಬೈಲ್ ಸಂ. 8050149617**) ಮತ್ತು ಶ್ರೀಮತಿ ಸೈಯೇದ (**ಮೊಬೈಲ್ ಸಂ. 7400445147**) ಅನ್ನು ಸಂಪರ್ಕಿಸುವುದು. ಅಧಿಕೃತ ಅಧಿಕಾರಿಗಳ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗೆ ಬಂದಂತೆ ಆಸ್ತಿಗಳ ಮೇಲೆ ಯಾವುದೇ ಋಣಭಾದ್ಯತೆಗಳು ಇಲ್ಲ, ಆದಾಗ್ಯೂ, ಇಚ್ಛೆಯುಳ್ಳ ಬಿಡ್‌ದಾರರು ಬಿಡ್ ಸಲ್ಲಿಸುವ ಮುಂಚೆ ಆಸ್ತಿಯ ಋಣಭಾದ್ಯತೆಗಳು ಹಾಗೂ ಸ್ವಾಮ್ಯ ಮುಂತಾದವುಗಳ ಬಗ್ಗೆ ಅವರದೇ ಸ್ವತಂತ್ರ ವಿಚಾರಣೆಗಳನ್ನು ನಡೆಸಿ ತಿಳಿದುಕೊಳ್ಳಬಹುದಾಗಿದೆ. ಷರತ್ತಿನ ಬಿಡ್‌ಗಳನ್ನು ಒಪ್ಪಿಕೊಳ್ಳುವುದಿಲ್ಲ. ಮೇಲೆ ಹೆಸರಿಸಲಾದ. ಸಾಲಗಾರರು/ ಜಾಮೀನುದಾರರು/ ಅಡಮಾನದಾರರುಗಳಿಗೆ ಈ ಮೂಲಕ ಅಧಿಸೂಚಿಸುವುದೇನೆಂದರೆ ಮೇಲೆ ತಿಳಿಸಿದ ಬಾಕಿ ಮೊತ್ತ ಜೊತೆಗೆ ಅಪ್ ಟು ಡೇಟ್ ಬಡ್ಡಿ ಹಾಗೂ ಸಾದಿಲ್ವಾರು ವೆಚ್ಚಗಳನ್ನು ಹರಾಜಿನ ದಿನಾಂಕಕ್ಕೆ ಮುಂಚೆ ಪಾವತಿ ಮಾಡಬೇಕು. ವಿಫಲರಾದಲ್ಲಿ ಮೇಲಿನ ಆಸ್ತಿಯನ್ನು ಮಾರಾಟ ಮಾಡಿ ಸಾಲದ ಬಾಕಿಗಾಗಿ ಹೊಂದಿಸಿಕೊಳ್ಳಲಾಗುವುದು. ಇನ್ನೂ ಬಾಕಿ ಉಳಿದ ಪಕ್ಷದಲ್ಲಿ ಅದನ್ನು ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲು ಮಾಡಿಕೊಳ್ಳಲಾಗುವುದು.

ದಿನಾಂಕ: 09.08.2024, ಸ್ಥಳ: ಹುಬ್ಬಳ್ಳಿ — ಸಹಿ/– ಅಧಿಕೃತ ಅಧಿಕಾರಿ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

RP/13/2024

BEFORE THE DEPUTY COMMISSISONER DHARWAD AT: DHARWAD

PETITIONERS : Smt. Shantavva w/o Malappa Metagodli of Tadakod Taluk Dharwad **V/s**

RESPONDENTS : 1. Shri Goudappagouda Shivanagouda Timmapurgoudar present Shri Goudappagouda A/F Irappa Metagodli of Tadakod Taluk Dharwad
2. Shri Maruti Bheemappa Sondiyavar of Tadasinakoppa Taluk Dharwad
3. The Tahsildar, Dharwad
4. The Revenue Inspector Garaga
5. Assistant Commissioner, Dharwad Sub Division, Dharwad

PUBLICATION NOTICE UNDER ORDER 5 RULE OF CPC

Whereas the petitioners have filed this peition challenging the legality and validity of the Order passed by Assistant Commissioner, Dharwad Sub Division, Dharwad, in RTS/AP/ID/142+293/2023 dated: 06-01-2023. The matter is fixed for hearing on **29-08-2024 at 3.00 PM.** So, you are all hereby called upon to be present on the said date of hearing personally or through your counsel, failing which the matter will be heard and decided in your absence.

Given under my hand and the seal of the court this 01st day of Aug 2024.

Dharwad 01.08.2024 — **Deputy Commissioner** Dharwad District, Dharwad

RP/12/2024

BEFORE THE DEPUTY COMMISSISONER DHARWAD AT: DHARWAD

PETITIONERS : Smt. Rudravva w/o Parappa Chandragi, Ligal heirs as per will deed of deceased Shri Chanappa Urf Chinnappa S/o Shivalingappa Metagodli of Tadakoda Taluk Dharwad

V/s

RESPONDENTS : 1. Shri Goudappagouda Shivanagouda Timmapurgoudar present Shri Goudappagouda A/F Irappa Metagodli of Tadakod Taluk Dharwad
2. Shri Maruti Bheemappa Sondiyavar of Tadasinakoppa Taluk Dharwad
3. The Tahsildar, Dharwad
4. The Revenue Inspector Garaga
5. Assistant Commissioner, Dharwad Sub Division, Dharwad

PUBLICATION NOTICE UNDER ORDER 5 RULE OF CPC

Whereas the petitioners have filed this peition challenging the legality and validity of the Order passed by Assistant Commissioner, Dharwad Sub Division, Dharwad, in RTS/AP/ID/142+293/2023 dated: 06-01-2023. The matter is fixed for hearing on **29-08-2024 at 3.00 PM.** So, you are all hereby called upon to be present on the said date of hearing personally or through your counsel, failing which the matter will be heard and decided in your absence.

Given under my hand and the seal of the court this 01st day of Aug 2024.

Dharwad 01.08.2024 — **Deputy Commissioner** Dharwad District, Dharwad